ಹಂಲಿಕುಂಟೆ ಕೆರೆಯ ನಿರ್ಮಾಣದ ಬಗ್ಗೆ

೩೬೮ (೧೨೬೭) ಶ್ರೀ ಹಿರೋಜ ವಿ.ಯಸ್. ಲಾಡ್ (ಸಂಡೂರ್).—ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಹುಲಿಕುಂಟೆ ಕೆರೆಯ ನಿರ್ಮಾಣವನ್ನು ಆರಂಭಿಸಿದ ದಿನಾಂಕ ಮತ್ತು ಅದು ಯಾವಾಗ ಮುಕ್ತಾಯಗೊಂಡಿತು?

ಆ) ಈ ಯೋಜನೆಯ ಅಡಿಯಲ್ಲಿ ಮುಳುಗಡೆಗೊಂಡ ಭೂಮಿಗಳ ರೈತರಿಗೆ ಪರಿಹಾರ ಧನವನ್ನು ಕೊಡಲಾಗಿದೆಯೇ?

ಇ) ಭೂಮಿಯನ್ನು ಸ್ವಾಧೀನಪಡಿಸಿಕೊಂಡ ದಿನಾಂಕ?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ದಿನಾಂಕ ೨೭-೯-೬೬ರಂದು ಪ್ರಾರಂಭಿಸಲಾಯಿತು ಹಾಗೂ ದಿನಾಂಕ ೨೬-೮-೭೯ ರಂದು ಮುಗಿಸಲಾಯಿತು.

ಆ) ಕೆಲವು ಭೂಮಾಲೀಕರಿಗೆ ಕೊಡಲಾಗಿದೆ. ಸುಮಾರು ೩.೯೫ ಎಕರೆ ಭೂಮಿಗೆ ಇನ್ನೂ ಪರಿಹಾರ ಕೊಡಬೇಕು.

ಇ) ಉದ್ಭವಿಸುವುದಿಲ್ಲ.

ಬೀದರ್ ತಾಲ್ಲೂಕಿನ ಟಾರು ರಸ್ತೆಗಳ ಕುರಿತು

೩೬೮ (೧೧೪೫) ಶ್ರೀ ನಾರಾಯಣರಾವ್ ಮನವಳ್ಳಿ (ಬೀದರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬೀದರ್ ತಾಲ್ಲೂಕಿನಲ್ಲಿ ಟಾರು ಹಾಕಿದ ರಸ್ತೆಗಳ ಒಟ್ಟು ಉದ್ದವೆಷ್ಟು ?

ಆ) ೧೯೮೨-೮೩ ಮತ್ತು ೧೯೮೩-೮೪ರ ಸಾಲಿನಲ್ಲಿ ಹೊಸದಾಗಿ ಟಾರು ಹಾಕಲು ತೆಗೆದುಕೊಂಡ ರಸ್ತೆಗಳ ಸಂಖ್ಯೆ ಎಷ್ಟು ?

ಇ) ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೯೬ ಕಿ.ಮಿ.ಗಳು (೩೧-೩-೮೩ರವರೆಗೆ)

ಆ) ೧೯೮೨-೮೩ರಲ್ಲಿ ಒಂದು ಕೆಲಸ. ೧೯೮೩-೮೪ ರಲ್ಲಿ ನಾಲ್ಕು ಕೆಲಸಗಳು.

ಇ) ೧೯೮೨-೮೩ರಲ್ಲಿ ತೆಗೆದುಕೊಂಡ ಒಂದು ಕಾಮಗಾರಿಯು ಪೂರ್ಣಗೊಂಡಿದೆ. ೧೯೮೩-೮೪ ರಲ್ಲಿ ತೆಗೆದುಕೊಂಡ ನಾಲ್ಕು ಕಾಮಗಾರಿಗಳನ್ನು ೧೯೮೪-೮೫ರ ಹೊತ್ತಿಗೆ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಬೀದರ್ ತಾಲ್ಲೂಕಿನಲ್ಲಿ ೮೧-೮೨ ಮತ್ತು ೮೨-೮೩ರಲ್ಲಿ ಮಂಜೂರಾದ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ

೩೭೦ (೧೧೭೭) ಶ್ರೀ ನಾರಾಯಣರಾವ್ ಮನವಳ್ಳಿ (ಬೀದರ್).—ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ೧೯೮೧-೮೨ ಮತ್ತು ೧೯೮೨-೮೩ನೇ ಸಾಲುಗಳಿಗೆ ಬೀದರ್ ತಾಲ್ಲೂಕಿನಲ್ಲಿ ಮಂಜೂರಾತಿ ಹೊಂದಿದ ಸಣ್ಣ ನೀರಾವರಿ ಕಾಮಗಾರಿಗಳ ಸಂಖ್ಯೆ?

ಆ) ಈ ಮೇಲೆ ಹೇಳಿದವುಗಳಲ್ಲಿ ಎಷ್ಟು ಕಾಮಗಾರಿಗಳು ಮುಗಿದಿದೆ?

ಇ) ಇಲ್ಲವಾದರೆ ಈ ಕಾಮಗಾರಿಗಳನ್ನು ಮುಗಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?